ದಿನಾಂಕಃ **16.10.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

PW-1 ರವರ ಪಾಟೀಸವಾಲು 3 ಮತ್ತು 5 ನೇ ಪ್ರತಿವಾದಿ ಪರ

ಶ್ರೀ ಎನ್ ಎಂ ಜಿ ವಕೀಲರಿಂದ

ನಾನು ವಾಸವಿರುವ ಬೆಂಗಳೂರಿನಲ್ಲಿರುವ ಮನೆ ನನ್ನ ಪತಿಯ ಹೆಸರಿನಲ್ಲಿರುತ್ತದೆ. ನನ್ನ ಯಜಮಾನರು ಹಾಗೂ ಅವರ ಸಹೋದರರು ಒಟ್ಟು ಕುಟುಂಬದಲ್ಲಿರುತ್ತಾರೆಂದರೆ ಸರಿ. ನನ್ನ ಪತಿ ಕೆ ಎಸ್ ಆರ್ ಟಿ ಸಿ ನೌಕರ ಎಂದರೆ ಸರಿ. ನಿಮ್ಮ ಪತಿಯನ್ನು ಹೊರೆತುಪಡಿಸಿ ಬೇರೆ ಯಾರು ಕುಟುಂಬದಲ್ಲಿ ವಿದ್ಯಾವಂತರಾಗಿರುವುದಿಲ್ಲ ಎಂದರೆ ಸರಿ ಹಾಗೂ ಸರ್ಕಾರಿ ನೌಕರರು ಸಹ ನಿಮ್ಮ ಪತಿಯನ್ನು ಹೊರೆತುಪಡಿಸಿ ಬೇರೆ ಯಾರು ಸರ್ಕಾರಿ ನೌಕರರಾಗಿರುವುದಿಲ್ಲ ಎಂದರೆ ಸರಿ. ನಾನು ವಿವಾಹವಾದ ನಂತರ ಸುಂಕಾತೊಣ್ಣೂರಿನಲ್ಲಿ ವಾಸವಾಗಿರುವುದಿಲ್ಲ.

ಚಿಕ್ಕಕಾಳೇಗೌಡ ನನ್ನ ಮಾವ ಯಾವಾಗ ಮೃತಪಟ್ಟಿರುತ್ತಾರೆಂಬುದು ನನಗೆ ಗೊತ್ತಿಲ್ಲ. ನನ್ನ ವಿವಾಹವು 2012 ರಲ್ಲಿ ನೆರವೇರಿರುತ್ತದೆ. ನನ್ನ ಅತ್ತೆ 1 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿ. ನಮ್ಮ ಕುಟುಂಬದ ವ್ಯವಹಾರಣೆಯನ್ನು ನಮ್ಮ ಅತ್ತೆ ಮಾಡುತ್ತಿದ್ದರು. ರಾಜೇಗೌಡರು ಎಂದಿಗೂ ಸಹ ಕುಟುಂಬದ ವ್ಯವಹಾರವನ್ನು ಮಾಡುತ್ತಿರಲಿಲ್ಲ ಎಂದರೆ ಸರಿ.

ಎಸ್ ಕೆ ಕಾಳೇಗೌಡರು ಕುಟುಂಬದ ಯಜಮಾನನಿಕೆಯನ್ನು ಮಾಡುತ್ತಿದ್ದರು. ಕುಟುಂಬದ ಸ್ವತ್ತುಗಳು ಹಕ್ಕು ಬದಲಾವಣೆಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕುಟುಂಬದ ಸ್ವತ್ತುಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಕಂದಾಯ ಯಾರು ಪಾವತಿ ಮಾಡುತ್ತಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಕಾಳೇಗೌಡ ಅಂಗಡಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ 2 ನೇ ಪ್ರತಿವಾದಿಯು ಕಂಟ್ರಾಕ್ಟರ್ ಆಗಿದ್ದರು. ರಾಜೇಗೌಡರ ಅತ್ತೆಮನೆಯವರು ಸ್ಥಿತಿವಂತರಾಗಿದ್ದರು ಎಂದರೆ ಸರಿ. ನನ್ನ ಪತಿ ತನ್ನ ವ್ಯವಹಾರವನ್ನು ತಾನು ಮಾಡುತ್ತಿದ್ದ ಹಾಗೂ ರಾಜೇಗೌಡರವರು ತನ್ನ ವ್ಯವಹಾರವನ್ನು ತಾನು ಮಾಡುತ್ತಿದ್ದ ಎಂದರೆ ಸರಿಯಲ್ಲ.

ರಾಜೇಗೌಡರವರು ಕಾಳೇಗೌಡರ ಜೊತೆ ಕಂಟ್ರಾಕ್ಟರ್ ಕೆಲಸಕ್ಕೆ ಸಹಾಯ ಮಾಡುತ್ತಿದ್ದ ಹಾಗೂ ಅಂಗಡಿಯನ್ನು ಸಹ ಹೊಂದಿದ್ದನು ಎಂದರೆ ಸರಿಯಲ್ಲ. ಕಾಳೇಗೌಡ ಕಂಟ್ರಾಕ್ಟ್ ಕೆಲಸ ಮಾಡುವ ಪೂರ್ವದಲ್ಲಿ ಅಂಗಡಿಯನ್ನು ಹೊಂದಿದ್ದನು ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರವರು ಪಾಂಡವಪುರದಲ್ಲಿರುವ ನಿವೇಶನವಾದ ದಾವಾ ಸ್ವತ್ತು ಸಂಖ್ಯೆ 9 ನ್ನು ದಾವೆಯ ಮೂಲಕ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಕಾಳೇಗೌಡ ಹಾಗೂ ನಿಮ್ಮ ಪತಿಯ ನಡುವೆ ದಾವಾ ಸ್ವತ್ತು ಸಂಖ್ಯೆ 9 ಕ್ಕೆ ಸಂಬಂಧಿಸಿದಂತೆ ಕುಟುಂಬದ

ಒಡಂಬಡಿಕೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತು ಸಂಖ್ಯೆ 9 ಕ್ಕೆ ಸಂಬಂಧಿಸಿದಂತೆ ಕುಟುಂಬದ ಒಡಂಬಡಿಕೆಯನುಸಾರವಾಗಿ ದಿನಾಂಕಃ 31.03.2015 ರಂದು ನೋಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ಪತಿ ಜೀವಿಂತವಾಗಿರುತ್ತಾರೆ. ದಾವೆಯನ್ನು ನನ್ನ ಪತಿಯ ಕಡೆಯಿಂದ ಸ್ವತ್ತು ಬರಬೇಕೆಂದು ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ನನ್ನ ಪತಿಯನ್ನು ಪಕ್ಷಗಾರರನ್ನಾಗಿ ದಾವೆಯಲ್ಲಿ ಸೇರಿಸಿರುವುದಿಲ್ಲ. ನನಗೂ ಹಾಗೂ ನನ್ನ ಪತಿಯ ನಡುವೆ ಭಿನ್ನಾಭಿಪ್ರಾಯ ಇರುತ್ತದೆ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ದಾವಾ ಪತ್ರದಲ್ಲಿ ಬರೆಸಿರುತ್ತೇನೆ. ಬೆಂಗಳೂರಿನಲ್ಲಿರುವ ಮನೆಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಹಾಗೂ ನನ್ನ ಗಂಡನ ನಡುವೆ ಭಿನ್ನಾಭಿಪ್ರಾಯಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿರುವುದಿಲ್ಲ.

ನೀವು ಹಾಗೂ ನಿಮ್ಮ ಪತಿ ಒಟ್ಟಿಗೆ ಅನೋನ್ಯವಾಗಿದ್ದು ಆದರೂ ಸಹ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪತಿಯನ್ನು ಪಕ್ಷಗಾರರನ್ನಾಗಿ ಮಾಡಿದರೆ ಸತ್ಯಾಂಶ ಹೊರಗಡೆ ಬರುತ್ತದೆ ಎಂದು ಹಾಗೂ ನಿಮ್ಮ ಬೆಂಗಳೂರಿನಲ್ಲಿರುವ ಸ್ವತ್ತನ್ನು ಸಹ ದಾವೆಯಲ್ಲಿ ಸೇರಿಸಬೇಕಾಗುತ್ತದೆ ಎಂದು ಪಕ್ಷಗಾರರನ್ನಾಗಿ ಮಾಡದೇ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಪತಿ ಸುಂಕಾತೊಣ್ಣೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ. ನನ್ನ ಪತಿ ಕರ್ತವ್ಯಕ್ಕೆ ಹೋಗುತ್ತಿದ್ದಾರೆ. ನನ್ನ ಪತಿ ಸುಂಕಾತೊಣ್ಣೂರಿನಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ ಹಾಗೂ ನಿಮ್ಮ ಪತಿ ಹಾಗೂ ನಿಮ್ಮ ಮಕ್ಕಳ ಜೊತೆ ಒಟ್ಟಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಭಿನ್ನಾಭಿಪ್ರಾಯದ ಬಗ್ಗೆ ವಾದ ಪತ್ರದಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಬರೆಸಿರುತ್ತೇನೆಂದು ನುಡಿಯುತ್ತಾರೆ. ನಿನ್ನ ಪತಿಯು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಚಿತಾವಣೆಯ ಮೇರೆಗೆ ನಿಮ್ಮ ಮೂಲಕ ದಾವೆಯನ್ನು ಸಲ್ಲಿಸಿ ಸುಳ್ಳು ಪರಿಹಾರವನ್ನು ಕೇಳುತ್ತಿದ್ದೀರ ಎಂದರೆ ಸರಿಯಲ್ಲ. ನನ್ನ ಪತಿ ತನ್ನ ಸಂಬಳದಿಂದ ಬಂದ ಆದಾಯವನ್ನು ಅವರ ಕುಟುಂಬಕ್ಕೆ ನೀಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ಪತಿ ಅವರ ಸಹೋದರರ ಕುಟುಂಬಕ್ಕೆ ಯಾವುದೇ ಸಹಾಯ ಮಾಡಿರುವುದಿಲ್ಲ ಬಂದಂತಹ ಆದಾಯದಲ್ಲಿ ನಿಮಗೆ ಮಾತ್ರ ಹಣವನ್ನು ನೀಡಿ ಕುಟುಂಬ ಪೋಷಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಒಟ್ಟು ಕುಟುಂಬದ ಸರ್ವೆ ನಂಬರ್ ಹಾಗೂ ಜಮೀನು ಎಷ್ಟು ಇರುತ್ತದೆ ? ಎಂಬುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿಗಳು ನನಗೆ ನೆನಪಿಲ್ಲ ಆದರೆ ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತು ಹೊಲದ ಭೂಮಿ ಎಂದರೆ ಸರಿ. ಮಳೆಯಧಾರಿತ ಭೂಮಿಗಳು ಎಂದರೆ ಸಾಕ್ಷಿಯು ಬೋರ್ವೆಲ್ ಸಹ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ

ಪ್ರತಿವಾದಿಯು ಸಾಲವನ್ನು ಪಡೆದು ಬೋರ್ವೆಲ್ ನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ನನಗೂ ಹಾಗೂ 1 ನೇ ಪ್ರತಿವಾದಿಗೂ ಯಾವುದೇ ವೈಮನಸ್ಯ ಇರುವುದಿಲ್ಲ. ಒಟ್ಟು ಕುಟುಂಬಕ್ಕೆ ಕೇವಲ ಒಂದೂವರೆ ಎಕರೆ ಹೊಲದ ಭೂಮಿ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಚಕ್ಕುಬಂದಿಗಳನ್ನು ಊರಿನಲ್ಲಿ ಗೊತ್ತಿರುವವರು ಪಂಚಾಯಿತಿಯಲ್ಲಿ ದಾಖಲೆಗಳನ್ನು ಪಡೆದು ಬರೆಸಿರುತ್ತಾರೆ. ದಾವಾ ಸ್ವತ್ತಿನ ಸಂಖ್ಯೆ **3** ರಿಂದ **5** ಒಂದೇ ಸ್ವತ್ತಾಗಿರುತ್ತದೆ ಒಂದೇ ಚಕ್ಕುಬಂದಿಯಾಗಿರುತ್ತದೆ ಎಂದರೆ ಸರಿಯಲ್ಲ. ಒಟ್ಟು ಮೂವತ್ತೆರೆಡುಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಹತ್ತು ಗುಂಟೆ ಜಮೀನು ನಾಲೆಗೆ ಭೂಸ್ವಾಧೀನವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹತ್ತು ಗುಂಟೆಗೆ ಬಂದಂತಹ ಭೂ ಪರಿಹಾರವನ್ನು 1 ನೇ ಪ್ರತಿವಾದಿಯು ಪಡೆದಿರುತ್ತಾರೆಂದರೆ ಸರಿ.

**3** ನೇ ಪ್ರತಿವಾದಿಯು ದಾವಾ ಸ್ವತ್ತಿನ ಸಂಖ್ಯೆ **8** ನ್ನು ಸ್ವಯಾರ್ಜಿತವಾಗಿ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿ ಮಾಡಲು ನನ್ನ ಪತಿ ಹಣದ ಸಹಾಯ ಮಾಡಿರುತ್ತಾರೆ. **3** ನೇ ಪ್ರತಿವಾದಿಯು ಯಾರಿಂದ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು **3** ನೇ ಪ್ರತಿವಾದಿಯು ಅವರ ದರದು ನಿಮಿತ್ತ **7** ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. **7** ನೇ ಪ್ರತಿವಾದಿಯು ನನಗೆ ಯಾರು ಎಂಬುದು ಗೊತ್ತಿಲ್ಲ. ಸದರಿ ವಿಚಾರವನ್ನು ನಮ್ಮ ಊರಿನವರು ಹೇಳಿ ಬರೆಸಿರುತ್ತಾರೆ ಅವರ ಹೆಸರನ್ನು ನಾನು ಮರೆತಿರುತ್ತೇನೆ. 1 ನೇ ಪ್ರತಿವಾದಿ ಹಾಗೂ ನಿಮ್ಮ ಪತಿ ಸೇರಿ ಸದರಿ ದಾವೆಯನ್ನು ಸಲ್ಲಿಸಿ **3** ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯವನ್ನು ನಿಮ್ಮ ಪತಿಯವರು ಪಡೆದು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ನಿಮಗೆ 8 ಮತ್ತು 9 ನೇ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಭಾಧ್ಯತೆಗಳಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಸಾ.ಓ.ಹೇ.ಸ. ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಪಾಂಡವಪುರ.